# ಧೋನಿ ಔಟ್?




ಕೊರೊನಾ ವೈರಸ್ ಕ್ರೀಡಾಕ್ಷೇತ್ರದಲ್ಲಿ ಉಂಟು ಮಾಡಿರುವ ತಲ್ಲಣ ಅಪಾರ. ಆದರೆ ಯಾವ ಕ್ರೀಡಾಪಟುಗಳಿಗೂ ವೈಯಕ್ತಿಕವಾಗಿ ಕೋವಿಡ್19 ಸೋಂಕು ತಗುಲಿಲ್ಲ. ಆದರೆ ಈಗ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರತಿವರ್ಷ ನಡೆಸುವ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ಗೆ ಕೊರೊನಾ ಮಾರಣಾಂತಿಕ ಹೊಡೆತ ನೀಡಿದೆ. ಈಗಿನ ಸೂಚನೆಗಳನ್ನೇ ನಂಬುವುದಾದರೆ ಈ ವರ್ಷದ ಐಪಿಎಲ್ ಪಂದ್ಯಾವಳಿ ರದ್ದಾದಂತೆಯೇ. ಇದರ ನೇರ ಪರಿಣಾಮ ಆಗಿರುವುದು ಮಹೇಂದ್ರಸಿಂಗ್ ಧೋನಿ ಮೇಲೆ. ಆಸ್ಟ್ರೇಲಿಯಾದಲ್ಲಿ ಈ ವರ್ಷ ಅಕ್ಟೋಬರ್ ವೇಳೆಗೆ ನಡೆಯಲು ನಿಗದಿಯಾಗಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಬೇಕೆಂಬ ಧೋನಿ ಕನಸು ನುಚ್ಚುನೂರಾಗಿದೆ. ಇನ್ನೀಗ ಧೋನಿಗೆ ಕ್ರಿಕೆಟ್‌ನಿಂದ ಪೂರ್ಣ ನಿವೃತ್ತಿ ಪಡೆಯುವುದೊಂದೇ ದಾರಿ.

ಕಳೆದ ವರ್ಷದ ನವೆಂಬರ್‌ನಲ್ಲಿ ವಿಶ್ವಕಪ್ ಕ್ರಿಕೆಟ್ ಏಕದಿನ ಟೂರ್ನಿಯ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಿದ ಬಳಿಕ ಧೋನಿ ಕ್ರಿಕೆಟ್ ಆಡಿಲ್ಲ. ಸೆಮಿಫೈನಲ್‌ನ ಸೋಲು ಧೋನಿಯನ್ನು ಕಂಗೆಡಿಸಿದ್ದು ನಿಜ. ಅಲ್ಲಿಂದೀಚೆಗೆ ಮಾಧ್ಯಮಗಳಲ್ಲಿ ಧೋನಿಯ ಕುರಿತು ಬಂದಷ್ಟು ವರದಿ, ಲೇಖನಗಳು ಇನ್ಯಾವ ಭಾರತೀಯ ಕ್ರಿಕೆಟಿಗನ ಬಗ್ಗೆಯೂ ಬರಲಿಲ್ಲ. ಅದರಲ್ಲೂ ಹೆಚ್ಚಿನವು ಧೋನಿಯ ನಿವೃತ್ತಿಯ ಕುರಿತೇ. ಮಾಧ್ಯಮ ವರದಿಗಳ ಬಗ್ಗೆ ಧೋನಿ ಹಿಂದೆ ಭಾರತೀಯ ತಂಡದ ನಾಯಕ ಆಗಿದ್ದಾಗಲೂ ಹೆಚ್ಚು ತಲೆ ಕೆಡಿಸಿಕೊಂಡವರಲ್ಲ. ಎರಡು ತಿಂಗಳು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತೇನೆ ಎಂದು ಕಾಶ್ಮೀರ ಗಡಿಗೆ ಹೋದರು. ಅಲ್ಲಿಂದ ಬಂದ ಬಳಿಕ ಸದ್ದಿಲ್ಲದೆ ಕ್ರಿಕೆಟ್ ಮೈದಾನದಲ್ಲಿ ಅಭ್ಯಾಸ ಆರಂಭಿಸಿದರು. ಇದೆಲ್ಲದರ ಹಿಂದೆ ಇದ್ದದ್ದು ಒಂದೇ ಗುರಿ. ಈ ಸಲದ 13ನೇ ಐಪಿಎಲ್ ಟೂರ್ನಿಯಲ್ಲಿ ಆಡಿ ತನ್ನ ಸಾಮರ್ಥ್ಯವನ್ನು ಆಯ್ಕೆಗಾರರಿಗೆ ತೋರಿಸುವುದು ಮತ್ತು ಟಿ20 ವಿಶ್ವಕಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆಯುವುದು. ಈಗ ಐಪಿಎಲ್ ಟೂರ್ನಿಯೇ ರದ್ದಾಗಿರುವುದರಿಂದ ಧೋನಿಗೆ ತನ್ನ ಸಾಮರ್ಥ್ಯ ಪ್ರದರ್ಶಿಸುವ ಅವಕಾಶವೇ ಕೈತಪ್ಪಿಹೋಗಿದೆ. ಧೋನಿಯ ವಿಕೆಟ್‌ಕೀಪಿಂಗ್ ಜಾಗಕ್ಕೆ ಕೆ.ಎಲ್.ರಾಹುಲ್ ಮತ್ತು ರಿಷಬ್ ಪಂತ್ ಹೆಸರು ಕೇಳಿಬರುತ್ತಿದೆ.

ಹಾಗೆಂದು ಧೋನಿ ಅಭಿಮಾನಿಗಳು ಆಸೆ ಕಳೆದುಕೊಂಡಿಲ್ಲ. 'ಕೊರೊನಾ ವೈರಸ್ ಹಾವಳಿ ಶೀಘ್ರವೇ ಮುಗಿಯಲಿದೆ. ಜುಲೈನಲ್ಲಿ ಚುಟುಕು ಐಪಿಎಲ್ ನಡೆಯಬಹುದು. ಅದು ನಡೆದರೆ ಧೋನಿ ತಮ್ಮ ಸಾಮರ್ಥ್ಯ ಖಂಡಿತ ತೋರಿಸುತ್ತಾರೆ, ಆಗ ವಿಶ್ವಕಪ್ ತಂಡಕ್ಕೆ ಆಯ್ಕೆ ನಿಶ್ಚಿತ' ಎನ್ನುವುದು ಅವರ ಅಂಬೋಣ. ಈ ಮಧ್ಯೆ ಇನ್ನು ಕೆಲವರು ಕೊರೊನಾ ಹಾವಳಿ ಡಿಸೆಂಬರ್‌ವರೆಗೂ ಮುಂದುವರಿಯಬಹುದು, ಹಾಗಾದರೆ ಅಕ್ಟೋಬರ್‌ನಲ್ಲಿ ನಡೆಯಬೇಕಿರುವ ವಿಶ್ವಕಪ್ ಕೂಡಾ ನಡೆಯಲಿಕ್ಕಿಲ್ಲ ಎನ್ನುತ್ತಿದ್ದಾರೆ.

ಆದರೆ ಇದರಿಂದ ಧೋನಿಗಂತೂ ಲಾಭವಾಗುವುದಿಲ್ಲ. ಏಕೆಂದರೆ ಈ ಜುಲೈನಲ್ಲಿ ಧೋನಿಗೆ 39 ವರ್ಷ ತುಂಬುತ್ತದೆ. ಮುಂದಿನ ವರ್ಷ 40ರ ಹರೆಯದಲ್ಲಿ ವಿಶ್ವಕಪ್ ಅವಕಾಶ ಸಿಗುವುದು ದುಸ್ತರ. ಪ್ರತಿಭೆ ಉಕ್ಕಿ ಹರಿಯುವ ಹುಮ್ಮಸ್ಸಿನ ಯುವ ಆಟಗಾರರು ಸಾಲುಗಟ್ಟಿ ನಿಂತಿರುವಾಗ ಧೋನಿಯ ನೆರವಿಗೆ ಯಾರಾದರೂ ಬರುವುದು ಕಷ್ಟ. ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿಯೂ ಧೋನಿ ಬಗ್ಗೆ ಅಂತಹ ಅಭಿಮಾನ ಇಟ್ಟುಕೊಂಡವರಲ್ಲ. ಆದರೆ ಧೋನಿಯ ಬಾಲ್ಯದ ಕೋಚ್ ಕೇಶವ್ ರಂಜನ್ ಬ್ಯಾನರ್ಜಿ ಪ್ರಕಾರ, ಧೋನಿಯಂತಹ ಅದ್ಭುತ ಆಟಗಾರನಿಗೆ ಐಪಿಎಲ್ ಪರೀಕ್ಷೆಗಳೆಲ್ಲ ಅಗತ್ಯವಿಲ್ಲ. ನೇರವಾಗಿ ಭಾರತ ತಂಡಕ್ಕೆ ಪ್ರವೇಶ ಪಡೆಯುವ ಸಾಮರ್ಥ್ಯ ಆತನಿಗಿದೆ. 'ಒಟ್ಟು 538 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಟವಾಡಿರುವ ಧೋನಿ ವಿಶ್ವಕಪ್ ತಂಡಕ್ಕೆ ಆಯ್ಕೆಯಾದರೆ ಒಂದೆರಡು ಪಂದ್ಯಗಳಲ್ಲೇ ಆಟಕ್ಕೆ ಹೊಂದಿಕೊಳ್ಳುವುದು ಖಚಿತ' ಎನ್ನುವುದು ಬ್ಯಾನರ್ಜಿ ವಿಶ್ವಾಸ. ಮೊಹಮ್ಮದ್ ಕೈಫ್ ಕೂಡಾ, 'ಈಗಲೂ ಧೋನಿ ಅತ್ಯುತ್ತಮ ಫೀಲ್ಡರ್, ಬ್ಯಾಟ್ಸ್‌ಮನ್. ಐಪಿಎಲ್ ಸಾಧನೆಯ ಆಧಾರ ಬೇಕಿಲ್ಲ' ಎನ್ನುತ್ತಾರೆ.

2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಗೆದ್ದ ಬಳಿಕ ಭಾರತ ಯಾವ ಐಸಿಸಿ ಟ್ರೋಫಿಯನ್ನೂ ಗೆದ್ದಿಲ್ಲ. ಟಿ20 ವಿಶ್ವಕಪ್ ಗೆಲ್ಲಬೇಕಿದ್ದರೆ ಅನುಭವ ಮತ್ತು ಆಕ್ರಮಣ ಎರಡೂ ಬಗೆಯ ಆಟಗಾರರು ಬೇಕು. ಸದ್ಯಕ್ಕಂತೂ ಕೊರೊನಾ ರಜೆಯಲ್ಲಿ ಧೋನಿ ಮನೆಯಲ್ಲೇ ಫಿಟ್‌ನೆಸ್ ಕಸರತ್ತು ನಡೆಸುತ್ತಿದ್ದಾರೆ. ಮನೆಯಲ್ಲೇ ಜಿಮ್, ಬ್ಯಾಡ್ಮಿಂಟನ್ ಕೋರ್ಟ್ ಮತ್ತು ಓಟದ ಕಾರಿಡಾರ್ ಇದೆ. ಕೊರೊನಾ ಕರುಣೆ ತೋರಬಹುದೆ... ಎನ್ನುವುದಷ್ಟೇ ಈಗಿನ ಪ್ರಶ್ನೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65